

بِسۡمِ اللّٰہِ الرَّحۡمٰنِ الرَّحِیۡمِ

# ಮುಸ್ಲಿಹ್ ಮೌಊದ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 22-02-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈಗ ಜಮಾಅತ್‌ನಲ್ಲಿ ಯೌಮೆ ಮುಸ್ಲಿಹ್ ಮೌಊದ್ ಜಲ್ಸಗಳು ಜರಗುತ್ತಾ ಇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಬ್ಬ ವಾಗ್ದತ್ತ ಪುತ್ರ ಜನಿಸುವ ಬಗ್ಗೆ ಅಲ್ಲಾಹನು ತಿಳಿಸಿದ್ದನು. ಆ ವಾಗ್ದತ್ತ ಪುತ್ರನ ಬಗ್ಗೆ ಅಲ್ಲಾಹನು ಹೀಗೆ ತಿಳಿಸಿದ್ದನು: ಆ ಪುತ್ರ ವಿಶಿಷ್ಟ ಗುಣಗಳನ್ನು ಹೊಂದುವವನಾಗಿ ಮಾಡಲ್ಪಡುವನು. ಅವನು ಧರ್ಮಕ್ಕೆ ಸೇವೆ ಸಲ್ಲಿಸುವವನಾಗುವನು. ದೀರ್ಘಾಯುಸ್ಸು ಪಡೆಯುವನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದಿಷ್ಟ ಕಾರ್ಯವನ್ನು ಮುಂದುವರಿಸುವನು. ಈ ಭವಿಷ್ಯವಾಣಿ 1886 ಫೆಬ್ರವರಿ 20ರಂದು ಪ್ರಕಟಿಸಲಾಯಿತು. ಈ ಭವಿಷ್ಯವಾಣಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ದೊರೆತ ನೆರವುಗಳು ಮತ್ತು ಅವರ ಸತ್ಯತೆಗಳ ಬಗ್ಗೆ ಬಹಳ ದೊಡ್ಡ ದೃಷ್ಟಾಂತವಾಗಿದೆ. ಈ ಪುತ್ರ ಜನಿಸುವನೆಂದು ಭವಿಷ್ಯ ನುಡಿಯಲಾದ ಕಾಲಾವಧಿಯೊಳಗೆ, ಅಂದರೆ 1889 ಜನವರಿ ದಿನಾಂಕ 12ರಂದು ಆ ಪುತ್ರ ಜನಿಸಿದಾಗ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಎಂದು ಹೆಸರಿಸಲಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನಿಧನ ಹೊಂದಿದಾಗ ಅವರಿಗೆ ಖಿಲಾಫತಿನ ಚಾದರವನ್ನು ಹೊದಿಸಲಾಯಿತು.

ಈ ಭವಿಷ್ಯವಾಣಿ ಕೇವಲ ಒಬ್ಬ ಪುತ್ರನ ಜನನದ ಬಗ್ಗೆ ನೀಡಲಾದ ಭವಿಷ್ಯವಾಣಿಯಾಗಿರಲಿಲ್ಲ. ಅದು ಒಬ್ಬ ವೈಭವಶಾಲಿ ಪುತ್ರನ ಜನನದ ಬಗ್ಗೆ ಭವಿಷ್ಯವಾಣಿಯಾಗಿತ್ತು. ಅವರ ಆಗಮನದ ಮೂಲಕ ಒಂದು ಆಧ್ಯಾತ್ಮಿಕ ಕ್ರಾಂತಿಯ ಅಸ್ತಿಭಾರ ಹಾಕಲ್ಪಡಲಿಕ್ಕಿತ್ತು. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕಣ್ಣು ತೆರೆದು ಈ ಭವಿಷ್ಯವಾಣಿಯ ಕಡೆಗೆ ನೋಡಬೇಕು. ಇದು ಕೇವಲ ಒಂದು ಭವಿಷ್ಯವಾಣಿಯಲ್ಲ. ಇದೊಂದು ವೈಭವಶಾಲಿ ದೈವಿಕ ದೃಷ್ಟಾಂತವಾಗಿದೆ. ಅದನ್ನು ಸರ್ವಶಕ್ತನಾದ ಅಲ್ಲಾಹನು ನಮ್ಮ ಆದರಣೀಯ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯತೆಯನ್ನೂ ಅವರ ಮಹತ್ವವನ್ನೂ ಬಹಿರಂಗಪಡಿಸಲು ಪ್ರಕಟಿಸಿದನು. ವಾಸ್ತವಿಕವಾಗಿ ಈ ದೃಷ್ಟಾಂತವು ಒಬ್ಬ ಮೃತನನ್ನು ಜೀವಂತಗೊಳಿಸುವುದಕ್ಕಿಂತ ನೂರಾರು ಪಟ್ಟು ಉನ್ನತ ಮಟ್ಟ ಹೊಂದಿರುವುದೂ ಅತ್ಯಂತ ಪರಿಪೂರ್ಣವೂ ಅತ್ಯಂತ ಅನುಗ್ರಹ ಭರಿತವೂ ಆಗಿದೆ. ಏಕೆಂದರೆ ಮೃತನನ್ನು ಜೀವಂತಗೊಳಿಸುವುದೆಂದರೆ ಅಲ್ಲಾಹನೊಂದಿಗೆ ಪ್ರಾರ್ಥಿಸಿ ಒಂದು ಆತ್ಮವನ್ನು ಮರಳಿ ತರಿಸುವುದು. ಆದರೆ ಈ ಭವಿಷ್ಯವಾಣಿ ಬಗ್ಗೆ ಹೇಳುವುದಾದರೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಖಾತಮುಲ್ ಅಂಬಿಯಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ನನಗೆ ದೊರೆತ ಅನುಗ್ರಹದಿಂದ ಈ ವಿನೀತನ ಪ್ರಾರ್ಥನೆಗಳನ್ನು ಸ್ವೀಕರಿಸಿಕೊಂಡು ಎಂತಹ ಅನುಗ್ರಹಭರಿತ ಆತ್ಮವನ್ನು ಕಳುಹಿಸುವ ವಾಗ್ದಾನ ನೀಡಿದನೆಂದರೆ ಆ ಆತ್ಮದ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಲೋಕದಾದ್ಯಂತ ಹಬ್ಬುವುವು.

ಒಂದು ಸಾಮಾನ್ಯ ಆತ್ಮವನ್ನು ಬೇಡಿಕೊಳ್ಳಲಿಲ್ಲ ಒಂದು ವೈಭವಶಾಲಿ ದೃಷ್ಟಾಂತವನ್ನು ಬೇಡಿಕೊಳ್ಳಲಾಗಿತ್ತು. ಅದಕ್ಕೆ ಉತ್ತರವಾಗಿ ಅಲ್ಲಾಹನು ಅನೇಕ ವೈಶಿಷ್ಟ್ಯಗಳನ್ನು ಹೊಂದಿದ ಒಬ್ಬ ಪುತ್ರನು ಜನಿಸುವ ಬಗ್ಗೆ ಸಮಾಚಾರ ನೀಡಿದನು. ಒಬ್ಬ ಭವ್ಯ ಪುತ್ರನ ಜನನದ ಬಗ್ಗೆ ಅಲ್ಲಾಹನು ತಿಳಿಸಿದನು. ಆ ಪುತ್ರ ದೀರ್ಘಾಯುಸ್ಸು ಪಡೆಯುವನೆಂದೂ ಅತ್ಯಂತ ಪರಿಶುದ್ಧನೂ ಸೂಕ್ಷ್ಮಗ್ರಾಹಿಯೂ ವೈಭವಶಾಲಿಯೂ ಐಶ್ವರ್ಯವಂತನೂ ಆಗುವನೆಂದೂ ಜನಾಂಗಗಳು ಅವನಿಂದ ಅನುಗ್ರಹ ಪಡೆಯುವರೆಂದೂ ಅವನು ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ಭರಿತನಾಗುವನೆಂದೂ ಅಲ್ಲಾಹನ ವಚನವಾದ ಪವಿತ್ರ ಖುರ್‌ಆನಿನ ಅತ್ಯಂತ ಆಳವಾದ ಜ್ಞಾನ ಅವನಿಗೆ ನೀಡಲ್ಪಡುವುದೆಂದೂ ಅಲ್ಲಾಹನಿಂದ ದೊರೆತ ಈ ಜ್ಞಾನದ ಮೂಲಕ ಎಂತಹ ವೈಭವಶಾಲಿ ಸೇವೆಯನ್ನು ಪವಿತ್ರ ಖುರ್‌ಆನ್‌ಗೋಸ್ಕರ ಮಾಡುವನೆಂದರೆ ಆ ಮೂಲಕ ಪವಿತ್ರ ಖುರ್‌ಆನಿನ ಮಹತ್ವಪೂರ್ಣ ಸ್ಥಾನ ಲೋಕದಾದ್ಯಂತ ಪ್ರಕಟವಾಗುವುದು. ಅವನು ಬಂಧಿತರಾದವರ ಬಿಡುಗಡೆಗೆ ಕಾರಣವಾಗುವನು. ಅವನು ಆಲಮೆ ಕಬಾಬ್ ಆಗುವನು ಎಂದರೆ ಅವನ ಜೀವಿತ ಕಾಲದಲ್ಲಿ ಎಂತಹ ವಿನಾಶಗಳು ಲೋಕದಾದ್ಯಂತ ಸಂಭವಿಸಲ್ಪಡುವುವು ಎಂದರೆ ಅದು ಲೋಕವನ್ನು ಹುರಿದುಬಿಡುವುದು. ಅವನು ಭೂಮಿಯ ಎಲ್ಲೆಗಳ ತನಕ ಪ್ರಸಿದ್ಧಿ ಗಳಿಸುವನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಪವಿತ್ರ ಖುರ್‌ಆನ್ ಓದಲು ಕಲಿತ ನಂತರ ಅವರನ್ನು ಶಾಲೆಗೆ ಪ್ರವೇಶಗೊಳಿಸಿ ವಿದ್ಯಾಭ್ಯಾಸ ಮಾಡಿಸುವ ಸಂದರ್ಭ ಲಭಿಸಿತ್ತು. ಮನೆಯಲ್ಲಿ ಸಹ ಅಧ್ಯಾಪಕರಿಂದ ಉರ್ದು, ಇಂಗ್ಲಿಷ್ ಭಾಷೆಗಳಲ್ಲಿ ಟ್ಯೂಶನ್ ನೀಡಲಾಯಿತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ನನಗೆ ಎಲ್ಲರಿಗಿಂತ ಹೆಚ್ಚು ಸಹಾಯ ಲಭಿಸಿರುವುದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರಿಂದಾಗಿದೆ. ಅವರು ವೈದ್ಯರೂ ಆಗಿದ್ದುದರಿಂದ ನನ್ನ ಆರೋಗ್ಯದ ಸ್ಥಿತಿ ಬಗ್ಗೆ ಅವರಿಗೆ ತಿಳಿದಿತ್ತು. ಪುಸ್ತಕದ ಕಡೆಗೆ ಹೆಚ್ಚು ಹೊತ್ತು ನೋಡುತ್ತಾ ಕಲಿಯಲು ನನಗೆ ಸಾಧ್ಯವಿರಲಿಲ್ಲ. ಆದುದರಿಂದ ಅವರು ನನ್ನನ್ನು ತಮ್ಮ ಸಮೀಪದಲ್ಲಿ ಕುಳ್ಳಿರಿಸಿ ಹೇಳುತ್ತಿದ್ದರು: ಮಿಯಾಂ, ನಾನು ಓದುತ್ತಾ ಇರುವಾಗ ನೀನು ಆಲಿಸುತ್ತಾ ಇರು. ಇದಕ್ಕೆ ಕಾರಣವೇನೆಂದರೆ ಬಾಲ್ಯದಲ್ಲಿ ನನ್ನ ಕಣ್ಣುಗಳಲ್ಲಿ ಅಸ್ವಸ್ಥತೆ ಇತ್ತು. ಆ ಕಾರಣದಿಂದ ನಿರಂತರವಾಗಿ ಮೂರು ನಾಲ್ಕು ವರ್ಷಗಳ ಕಾಲ ನನ್ನ ಕಣ್ಣಿನಲ್ಲಿ ನೋವಾಗುತ್ತಿತ್ತು. ನನ್ನ ಕಣ್ಣುಗಳಲ್ಲಿ ರೋಗಬಾಧೆಯ ಕಾರಣದಿಂದ ಎಂತಹ ಸ್ಥಿತಿ ತಲೆದೋರಿತ್ತೆಂದರೆ

ಡಾಕ್ಟರ್‌ಗಳು ಹೇಳಿದ್ದರು, ದೃಷ್ಟಿ ನಾಶವಾಗುವುದು ಎಂದು. ಈ ರೋಗದ ಕಾಠಿಣ್ಯ ಮತ್ತು ನಿರಂತರ ಬಾಧೆಯ ಕಾರಣದಿಂದ ನನ್ನ ಒಂದು ಕಣ್ಣಿನ ದೃಷ್ಟಿ ಲೋಪವಾಯಿತು. ನನ್ನ ಎಡಗಣ್ಣಿನಲ್ಲಿ ದೃಷ್ಟಿ ಇಲ್ಲ. ನಾನು ಮಾರ್ಗವನ್ನು ನೋಡಬಲ್ಲೆನು. ಆದರೆ ಪುಸ್ತಕ ಓದಲಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉಪಾಧ್ಯಾಯರಿಗೆ ಹೇಳಿದರು: ವಿದ್ಯಾಭ್ಯಾಸ ಅವನ ಇಷ್ಟಪ್ರಕಾರ ನಡೆಸಿರಿ. ಅವನಿಗೆ ಎಷ್ಟು ಕಲಿಯಲು ಇಷ್ಟವಿದೆಯೋ ಅಷ್ಟು ಕಲಿಯಲಿ. ಅದರ ಬಗ್ಗೆ ಒತ್ತಾಯ ಮಾಡಬೇಡಿರಿ. ಏಕೆಂದರೆ ಅವನ ಆರೋಗ್ಯ ಹೇಗಿದೆ ಎಂದರೆ ವಿದ್ಯಾಭ್ಯಾಸದ ಭಾರ ಹೊರಲಾರ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ನನ್ನೊಂದಿಗೆ ಹೇಳುತ್ತಿದ್ದರು, ಪವಿತ್ರ ಖುರ್‌ಆನಿನ ಭಾಷಾಂತರ ಮತ್ತು ಬುಖಾರಿ ಶರೀಫ್ ಮೌಲವಿ ಸಾಹಿಬರಿಂದ ಕಲಿತುಕೋ ಎಂದು. ಅವರು ಹೀಗೆ ಸಹ ಹೇಳಿದ್ದರು: ಸ್ವಲ್ಪಮಟ್ಟಿಗೆ ವೈದ್ಯ ಶಾಸ್ತ್ರ ಸಹ ಕಲಿತುಕೋ. ಇದು ನಮ್ಮ ಕುಟುಂಬದ ವೃತ್ತಿಯಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮಾಸ್ಟರ್ ಫಕೀರುಲ್ಲಾ ಸಾಹಿಬ್ ನಮ್ಮ ಗಣಿತದ ಅಧ್ಯಾಪಕರಾಗಿದ್ದರು. ಅವರು ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನನ್ನ ಬಗ್ಗೆ ದೂರಿತ್ತರು. ಈತ ಏನೂ ಕಲಿಯುವುದಿಲ್ಲ. ಕೆಲವು ಸಾರಿ ಶಾಲೆಗೆ ಬರುತ್ತಾನೆ. ಕೆಲವು ಸಾರಿ ಬರುವುದೂ ಇಲ್ಲ. ನನಗೆ ನೆನಪಿದೆ ಮಾಸ್ಟರ್ ಸಾಹಿಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನನ್ನ ಬಗ್ಗೆ ದೂರಿತ್ತಾಗ ನಾನು ಹೆದರಿ ಸುಮ್ಮನೆ ಕುಳಿತಿದ್ದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಿಟ್ಟಾಗುವರೆಂದು ನಾನು ಭಯಪಟ್ಟೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದೂರನ್ನು ಆಲಿಸಿ ಹೇಳಿದರು: ನೀವು ಬಾಲಕನ ಬಗ್ಗೆ ಶ್ರದ್ಧೆವಹಿಸುತ್ತಿರುವುದು ನಿಮ್ಮ ಬಹಳ ದೊಡ್ಡ ಉಪಕಾರವಾಗಿದೆ. ಈ ಬಾಲಕ ಶಾಲೆಗೆ ಯಾವಾಗಲಾದರೂ ಒಮ್ಮೆ ಹೋಗುತ್ತಾನೆಂದು ತಿಳಿದು ಸಂತೋಷವಾಯಿತು. ಅವನು ಯಾವಾಗಲಾದರೂ ಶಾಲೆಗೆ ಹೋಗುತ್ತಿರುವುದು ಬಹಳ ಒಳ್ಳೆಯದೇ ಆಗಿದೆ. ಆದರೆ ಅವನ ಆರೋಗ್ಯ ಸ್ಥಿತಿ ಹೇಗಿದೆ ಎಂದರೆ ಅವನು ವಿದ್ಯಾಭ್ಯಾಸ ಮಾಡಲಾರ. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಗುತ್ತಾ ಹೇಳಿದರು: ನಾವು ಅವನ ಮೂಲಕ ಕಿರಾಣಿ ಅಂಗಡಿ ತೆರೆಯಲು ಉದ್ದೇಶಿಸುವುದೇನೂ ಇಲ್ಲ. ಅವನಿಗೆ ಗಣಿತ ತಿಳಿದರೂ ತಿಳಿಯದಿದ್ದರೂ ಅದೊಂದು ಮುಖ್ಯ ವಿಷಯವಲ್ಲ. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಅವರ ಸಹಾಬರು ಕಲಿತ ಗಣಿತವಾದರೂ ಏನು. ಅವನು ಶಾಲೆಗೆ ಹೋಗುವುದಾದರೆ ಒಳ್ಳೆಯದೇ ಆಗಿದೆ. ಅವನನ್ನು ಅದರ ಬಗ್ಗೆ ಒತ್ತಾಯಿಸುವುದು ಬೇಡ.

ಮಾಸ್ಟರ್ ಸಾಹಿಬರು ಈ ಮಾತುಗಳನ್ನು ಆಲಿಸಿ ಮರಳಿ ಹೋದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಮೃದು ಮನೋಭಾವದಿಂದ ನಾನು ಇನ್ನಷ್ಟು ಲಾಭ ಪಡೆಯಲು ಪ್ರಯತ್ನಿಸಿದೆ. ಕ್ರಮೇಣ ನಾನು ಶಾಲೆಗೆ ಹೋಗುವುದನ್ನೇ ಬಿಟ್ಟುಬಿಟ್ಟೆ. ಕೆಲವು ಸಾರಿ ತಿಂಗಳಿಗೊಮ್ಮೆ ಅರ್ಧ ದಿನ ಹೋಗುತ್ತಿದ್ದೆ. ಒಟ್ಟಿನಲ್ಲಿ ಈ ರೀತಿ ನನ್ನ ವಿದ್ಯಾಭ್ಯಾಸ ನಡೆಯಿತು. ಆದರೆ ನಿರ್ಬಂಧಿತ ಅವಸ್ಥೆಯಲ್ಲಿ ಹೀಗೆ ಸಂಭವಿಸಿತು. ಬಾಲ್ಯದಲ್ಲಿ ಕಣ್ಣಿನ ರೋಗವಲ್ಲದೆ ಯಕೃತ್‌ಗೆ ಸಂಬಂಧಿಸಿದ ಕಾಯಿಲೆಯೂ ನನಗಿತ್ತು. ಆರು ತಿಂಗಳುಗಳ ತನಕ ಹೆಸರು ಬೇಳೆಯ ನೀರು ಮತ್ತು ಸಾಗು ಧಾನ್ಯದ ನೀರು ನನಗೆ ನೀಡಲಾಗುತ್ತಿತ್ತು. ಅದರೊಂದಿಗೆ ಪಿತ್ತಕೋಶವೂ ಬೀಗಿತ್ತು. ರೆಡ್‌ಅಯೋಡೈಡ್ ಆಫ್ ಮರ್ಕ್ಯುರಿಯನ್ನು ಪಿತ್ತಕೋಶದ ಸ್ಥಳದಲ್ಲಿ ಮಾಲೀಸು ಮಾಡಲಾಗುತ್ತಿತ್ತು. ಅದೇ ರೀತಿ ಕೊರಳಲ್ಲಿಯೂ ಮಾಲೀಸು ಮಾಡಲಾಗುತ್ತಿತ್ತು. ಏಕೆಂದರೆ ನನಗೆ ಟಾನ್ಸಿಲ್ಸ್ ಸಂಬಂಧಿತ ಕಾಯಿಲೆ ಸಹ ಇತ್ತು. ಒಟ್ಟಿನಲ್ಲಿ ಕಣ್ಣಿನ ಕಾಯಿಲೆ, ಯಕೃತ್ತಿನ ಕಾಯಿಲೆ, ಪಿತ್ತಕೋಶದ ಕಾಯಿಲೆ, ಅದರೊಂದಿಗೆ ಜ್ವರ ಬಂದು ಆರು ಆರು ತಿಂಗಳುಗಳ ಕಾಲ ಬಾಧಿಸುತ್ತಿತ್ತು. ನನ್ನ ಬಗ್ಗೆ ಹಿರಿಯರು ಮಾಡಿದ ತೀರ್ಮಾನ 'ಅವನು ಅವನಿಗಿಷ್ಟವಿರುವಷ್ಟು ಕಲಿಯಲಿ, ಅವನನ್ನು ಒತ್ತಾಯಪಡಿಸುವುದು ಬೇಡ.' ಇವುಗಳಿಂದೆಲ್ಲಾ ನನ್ನ ವಿದ್ಯಾಭ್ಯಾಸ ಯೋಗ್ಯತೆಯ ಸ್ಥಿತಿ ಏನೆಂದು ಪ್ರತಿಯೊಬ್ಬನು ಅಂದಾಜು ಮಾಡಬಲ್ಲನು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಯಾವಾಗಲೂ ನನ್ನೊಂದಿಗೆ ಹೇಳುತ್ತಿದ್ದರು: ಮಿಯಾಂ, ನಿನ್ನ ಸ್ಥಿತಿ ಹೇಗಿದೆ ಎಂದರೆ ನೀನು ಸ್ವತಃ ಓದಲಾರೆ ನನ್ನ ಸಮೀಪಕ್ಕೆ ಬಂದು ಕುಳಿತುಕೋ ನಾನು ಓದುತ್ತಾ ಇರುವಾಗ ನೀನು ಆಲಿಸುತ್ತಾ ಇರು. ಹಾಗೆ ಅವರು ಮೊದಲು ನನಗೆ ಪವಿತ್ರ ಖುರ್‌ಆನ್ ಕಲಿಸಿದರು. ಅನಂತರ ಬುಖಾರಿ ಶರೀಫ್ ಕಲಿಸಿದರು. ಅವರು ನನಗೆ ಪವಿತ್ರ ಖುರ್‌ಆನ್ ಕಲಿಸಿದ್ದು ನಿಧಾನವಾಗಿಯೇನೂ ಅಲ್ಲ. ಅವರ ರೀತಿ ಹೇಗಿತ್ತೆಂದರೆ ಅವರು ಪವಿತ್ರ ಖುರ್‌ಆನ್ ಓದುತ್ತಾ ಭಾಷಾಂತರ ಮಾಡುತ್ತಾ ಮುಂದೆ ಸಾಗುತ್ತಿದ್ದರು. ಯಾವುದಾದರೂ ವಿಶದೀಕರಣದ ಆವಶ್ಯಕತೆ ಇದ್ದಲ್ಲಿ ವಿಶದೀಕರಿಸುತ್ತಿದ್ದರು. ಅವರು ಬೇಗ ಬೇಗನೆ ಓದುತ್ತಿದ್ದರು. ಅವರು ಮೂರು ತಿಂಗಳೊಳಗೆ ನನಗೆ ಪವಿತ್ರ ಖುರ್‌ಆನ್ ಸಂಪೂರ್ಣವಾಗಿ ಕಲಿಸಿದರು. ನಾನು ಅವರಿಂದ ವೈದ್ಯಶಾಸ್ತ್ರ ಸಹ ಕಲಿತೆನು. ಪವಿತ್ರ ಖುರ್‌ಆನಿನ ವ್ಯಾಖ್ಯಾನ ಸಹ ಕಲಿತೆನು. ಅವರು ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಎರಡು ತಿಂಗಳಲ್ಲಿ ಕಲಿಸಿದರು. ಅವರು ನನ್ನನ್ನು ತಮ್ಮ ಸಮೀಪ ಕುಳ್ಳಿರಿಸಿ ಕೆಲವು ಸಾರಿ ಅರ್ಧ ಜುಝ್‌ಅ್, ಕೆಲವು ಸಾರಿ ಒಂದು ಜುಝ್‌ಅ್ ಓದಿ ಹೇಳುತ್ತಿದ್ದರು. ಕೆಲವು ಸಾರಿ ಯಾವುದಾದರೂ ಒಂದು ವಚನದ ವ್ಯಾಖ್ಯಾನ ಸಹ ಹೇಳಿ ಕೊಡುತ್ತಿದ್ದರು. ಬುಖಾರಿ ಶರೀಫನ್ನು ಎರಡು ಮೂರು ತಿಂಗಳಲ್ಲಿ ನನಗೆ ಓದಿ ಹೇಳಿ ಮುಗಿಸಿದರು. ಒಮ್ಮೆ ಅವರು ರಮಝಾನ್ ತಿಂಗಳಲ್ಲಿ ಸಂಪೂರ್ಣ ಖುರ್‌ಆನಿನ ದರ್ಸ್ ನೀಡಿದಾಗ ನಾನು ಸಹ ಅದರಲ್ಲಿ ಭಾಗವಹಿಸಿದ್ದೆನು. ಕೆಲವು ಅರಬಿ ಪುಸ್ತಕಗಳನ್ನು ಅವರ ಮೂಲಕ ಕಲಿತೆನು. ಒಟ್ಟಾರೆ ನನ್ನ ವಿದ್ಯಾಭ್ಯಾಸ ಆ ರೀತಿ ಇತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಭಾಷಣಗಳು, ಖುತ್‌ಬಗಳು, ಅವರು ಬರೆದ ಗ್ರಂಥಗಳು, ಅವರ ಪವಿತ್ರ ಖುರ್‌ಆನ್ ವ್ಯಾಖ್ಯಾನಗಳು ಇವುಗಳಿಂದೆಲ್ಲಾ ಅವರಿಗೆ ಜ್ಞಾನವನ್ನು ಕಲಿಸಿದುದು ಅಲ್ಲಾಹನೇ ಎಂದು ದೃಢವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿ 1906ರ ಜಲ್ಸಾ ಸಾಲಾನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪ್ರಥಮ ಸಾರ್ವಜನಿಕ ಭಾಷಣ ಮಾಡಿದರು. ಹಝ್ರತ್ ಖಾಝಿ ಮುಹಮ್ಮದ್ ಝುಹೂರುದ್ದೀನ್ ಅಕ್ಮಲ್ ಸಾಹಿಬ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನುಬುವ್ವತ್ತಿನ

ಗೋಪುರದ ಪ್ರಕಾಶಮಾನವಾದ ನಕ್ಷತ್ರ, ರಿಸಾಲತಿನ ಉನ್ನತಿಯ ಪ್ರಕಾಶಮಾನವಾದ ವಜ್ರ, ಮಹ್‌ಮೂದ್ ಸಲ್ಲಮಲ್ಲಾಹುಲ್ ವದೂದ್ ಶಿರ್ಕ್ ಕುರಿತು ಭಾಷಣ ಮಾಡಲು ಎದ್ದು ನಿಂತರು. ಏನು ಹೇಳಲಿ, ಅವರ ಭಾಷಣ ವಾಗ್ಝರಿಯ ಒಂದು ಪ್ರವಾಹವಾಗಿತ್ತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಯೋಚನೆಗಳ ಪಕ್ವತೆ ಪವಾಡಕ್ಕಿಂತ ಕಡಿಮೆಯದೇನೂ ಅಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಒಂದು ದೃಷ್ಟಾಂತವಾಗಿದೆ. ಇದರಿಂದ ತಿಳಿಯಬಹುದಾಗಿದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ತರಬೇತಿ ಎಂತಹ ಪರಿಪೂರ್ಣತೆಗೆ ತಲಪಿಸಿದೆ ಎಂದು. ಅವರು ಆಧ್ಯಾತ್ಮಿಕತೆ ಬಗ್ಗೆ ವಿಸ್ಮಯಕರವಾದ ರೀತಿಯಲ್ಲಿ ಚರ್ಚಿಸಿದರು.

ಆ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಧಾರ್ಮಿಕ ಚಟುವಟಿಗಳು ಅವರ ಉತ್ಸಾಹ ಅವರ ಬೌಧಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ ತೋರಿಸುತ್ತಿದ್ದುದೇನೆಂದರೆ ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲ್ಪಟ್ಟ 'ಓ ಜಲ್ದ್ ಜಲ್ದ್ ಬಢೇಗಾ' (ಅವನು ಬೇಗ ಬೇಗನೆ ಬೆಳೆಯುವನು) ಎಂಬ ಮಾತು ಅವರಿಗೆಯೇ ಅನ್ವಯಿಸುತ್ತದೆ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಅವರ ಧಾರ್ಮಿಕ ಉತ್ಸಾಹ ಮನವರಿಕೆ ಆಗಿತ್ತು. ಅವರು ಹೇಳಿದರು: ಮಿಯಾಂ ಮಹ್‌ಮೂದ್‌ನಲ್ಲಿ ಎಷ್ಟು ಧಾರ್ಮಿಕ ಉತ್ಸಾಹ ಕಂಡು ಬರುತ್ತದೆ ಎಂದರೆ ನಾನು ಕೆಲವು ಸಾರಿ ಅವನಿಗಾಗಿ ವಿಶಿಷ್ಟವಾಗಿ ಪ್ರಾರ್ಥಿಸುತ್ತೇನೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಜೀವನ ಚರಿತ್ರೆ ಬರೆದಿದ್ದಾರೆ. ಅದರಲ್ಲಿ ಒಂದು ಸ್ಥಳದಲ್ಲಿ ಹೀಗೆ ಬರೆದಿದ್ದಾರೆ: ಪ್ರಥಮ ಖಿಲಾಫತ್ ಆರಂಭವಾದಾಗ ಹಝ್ರತ್ ಸಾಹಿಬ್‌ಝಾದ ಸಾಹಿಬರ ಪ್ರಾಯ 19 ಆಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ನಿಧನ ಹೊಂದಿದಾಗ ಅವರು ತಮ್ಮ ಪ್ರಾಯದ 26ನೇ ವರ್ಷಕ್ಕೆ ಪ್ರವೇಶಿಸಿದ್ದರು. ಅಂತಹ ಯುವ ಪ್ರಾಯದಲ್ಲಿ ಅವರ ಭಾಷಣ ಮತ್ತು ಲೇಖನದ ಸ್ಥಿತಿ ಹೇಗಿತ್ತೆಂದು ಕೆಲವು ಉದಾಹರಣೆಗಳನ್ನು ನೀಡುತ್ತೇನೆ. ಅವರ ಯೋಚನೆ ಮತ್ತು ಚಿಂತನೆಗಳಲ್ಲಿ ಒಬ್ಬ ಹಿರಿಯ ಚಿಂತಕನ ರೀತಿಯ ಪಕ್ವತೆ ಇದ್ದಿತು. ಅವರು ಬಳಸುವ ಶಬ್ದಗಳು ಪ್ರಭಾವಶಾಲಿ, ಆಕರ್ಷಕ, ಪ್ರಾಮಾಣಿಕತೆ ಭರಿತವಾಗಿತ್ತು. ಅವರ ಮಾತುಗಳು ಕೃತ್ರಿಮತೆ ರಹಿತವಾಗಿದ್ದುವು. ಅವರ ಬರಹ ಸರಳವಾಗಿದ್ದುವು. ಅವರ ಭಾಷಣಗಳಲ್ಲಿ ಸಹಜವಾದ ಹರಿವು ಇತ್ತು. ಅವರ ಬರಹಗಳು ಸುಲಭಗ್ರಾಹ್ಯವಾದ ಹರಿಯುತ್ತಿರುವ ನದಿಯಾಗಿತ್ತು. ಅವರ ಭಾಷಣಗಳೂ ಬರಹಗಳೂ ಪವಿತ್ರ ಖುರ್‌ಆನಿನ ಜ್ಞಾನದ ಜಲದಿಂದ ಭರಿತವೂ ಹೃದಯಕ್ಕೂ ಮೆದುಳಿಗೂ ಸಾಂತ್ವನ ನೀಡುವವುಗಳೂ ಆಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ತನ್ನ 19ನೇ ವರ್ಷ ಪ್ರಾಯದಲ್ಲಿ ಅವರು ಮಾಡಿದ ಭಾಷಣದ ಬಗ್ಗೆ ಹಝ್ರತ್ ಮೌಲವಿ ಶೇರ್ ಅಲಿ ಸಾಹಿಬ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ನಾನು ನನ್ನ ಈ ಲೇಖನದಲ್ಲಿ ಪ್ರಸ್ತಾಪಿಸಲು ಇಚ್ಛಿಸುವ ಇನ್ನೊಂದು ಘಟನೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಪ್ರಥಮ ಬಾರಿ ಜರಗಿದ ಜಲ್ಸಾ ಸಾಲಾನದಲ್ಲಿ ಅವರು ಮಾಡಿದ ಭಾಷಣದ ಬಗ್ಗೆಯಾಗಿದೆ. ಈ ಜಲ್ಸಾ ಮದರಸ ಅಹ್ಮದಿಯಾದ ಅಂಗಳದಲ್ಲಿ ಜರಗಿತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಹುಝೂರರ ಬಲ ಭಾಗದಲ್ಲಿ ವೇದಿಕೆಯಲ್ಲಿದ್ದರು. ಈ ಭಾಷಣಕ್ಕೆ ಸಂಬಂಧಿಸಿ ಎರಡು ವಿಷಯಗಳು ಗಮನಾರ್ಹವಾಗಿವೆ. ಒಂದನೆಯದಾಗಿ ಭಾಷಣದ ಸಮಯದಲ್ಲಿ ಅವರ ಧ್ವನಿ, ಅವರ ನಿಲುವು, ಅವರ ಉಚ್ಚಾರಣೆ ಮತ್ತು ಭಾಷಣದ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಧ್ವನಿ ಮತ್ತು ಭಾಷಣದ ರೀತಿಯನ್ನು ಅತ್ಯಂತ ಹೆಚ್ಚು ಹೋಲುತ್ತಿತ್ತು. ಆಗ ಭಾಷಣವನ್ನು ಆಲಿಸುವವರ ಹೃದಯದಲ್ಲಿ ಇತ್ತೀಚೆಗೆ ನಮ್ಮಿಂದ ಅಗಲಿಹೋದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನೆನಪು ತಾಜಾ ಆಗುತ್ತಿತ್ತು. ಗ್ರಾಮಫೋನಿನಿಂದ ಅದೃಶ್ಯ ವ್ಯಕ್ತಿಯ ಧ್ವನಿಯನ್ನು ಆಲಿಸುವ ಹಾಗೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾಗ್ದತ್ತ ಪುತ್ರನ ತುಟಿಗಳಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಆಲಿಸುವ ಹಾಗೆ ಭಾಸವಾಗಿ ಬಹುತೇಕ ಶ್ರೋತೃಗಳ ಕಣ್ಣುಗಳಿಂದ ಅಶ್ರುಧಾರೆ ಜಾರಿಗೊಂಡಿತು. ಹಾಗೆ ಕಣ್ಣೀರು ಹರಿಸಿದವರಲ್ಲಿ ಈ ವಿನೀತನೂ ಸೇರಿದ್ದಾನೆ. ನಾನು ಹೇಳುವ ಎರಡನೆಯ ವಿಷಯವೇನೆಂದರೆ, ಅವರ ಭಾಷಣ ಮುಕ್ತಾಯವಾದಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು – ಅವರು ತಮ್ಮ ಸಂಪೂರ್ಣ ಜೀವಿತವನ್ನು ಪವಿತ್ರ ಖುರ್‌ಆನ್ ಬಗ್ಗೆ ಗಾಢವಾಗಿ ಅಧ್ಯಯನ ನಡೆಸುವುದಕ್ಕೆ ವಿನಿಯೋಗಿಸಿದ್ದರು ಮತ್ತು ಪವಿತ್ರ ಖುರ್‌ಆನ್ ಅವರ ಆತ್ಮದ ಆಹಾರವಾಗಿತ್ತು– ಹೇಳಿದರು: ಮಿಯಾಂ ಪವಿತ್ರ ಖುರ್‌ಆನಿನ ಅನೇಕ ವಚನಗಳ ಬಗ್ಗೆ ಎಂತಹ ವ್ಯಾಖ್ಯಾನ ನೀಡಿದರೆಂದರೆ ಅವು ನನಗೆ ಸಹ ಹೊಸದಾಗಿತ್ತು.

ಈ ಜ್ಞಾನವನ್ನು ಆ ತರುಣನಿಗೆ ಕಲಿಸಿದವರು ಯಾರು. ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಯೂಸುಫ್ ಅಲೈಹಿಸ್ಸಲಾಮರ ಬಗ್ಗೆ ಈ ಕೆಳಗಿನಂತೆ ಹೇಳಿದವನೇ ಕಲಿಸಿದನು. وَلَمَّا بَلَغَ أَشُدَّهُ آتَيْنَاهُ حُكْمًا وَعِلْمًا ۚ وَكَذَٰلِكَ نَجْزِي الْمُحْسِنِينَ – **ವಲಮ್ಮಾ ಬಲಗ ಅಶುದ್ಧಹು ಆತೈನಾಹು ಹುಕ್‌ಮನ್ ವ ಇಲ್‌ಮನ್ ವ ಕಝಾಲಿಕ ನಜ್‌ಝಿಲ್ ಮುಹ್‌ಸಿನೀನ್.** ಹಾಗೆ ಅವನು ಪೂರ್ಣ ಪ್ರೌಢಾವಸ್ಥೆಯನ್ನು ಪಡೆದಾಗ ನಾವು ಆತನಿಗೆ ತೀರ್ಮಾನದ ಶಕ್ತಿಯನ್ನೂ ಜ್ಞಾನವನ್ನೂ ನೀಡಿದೆವು. ಈ ರೀತಿಯಲ್ಲಿ ನಾವು ಸಜ್ಜನರಿಗೆ ಪ್ರತಿಫಲ ನೀಡುತ್ತೇವೆ. (12:23).

ಅವರು ಕೇವಲ ಸಾಮಾನ್ಯ ಬುದ್ಧಿ ಶಕ್ತಿಯ ಮತ್ತು ವಿವೇಕದ ಮಾತುಗಳನ್ನು ಹೇಳಲಿಲ್ಲ. ಅವರು ಪವಿತ್ರ ಖುರ್‌ಆನಿನ ನವ್ಯ ಜ್ಞಾನಭರಿತ ವಿವರಣೆ ನೀಡಿದರು. ಅಲ್ಲಾಹನು ಪವಿತ್ರ ಖುರ್‌ಆನ್ ಬಗ್ಗೆ ಹೇಳುತ್ತಾನೆ: لَّا يَمَسُّهُ إِلَّا الْمُطَهَّرُونَ – **ಲಾ ಯಮಸ್ಸುಹು ಇಲ್ಲಲ್ ಮುತಹ್ಹರೂನ್.** ಪರಿಶುದ್ಧರಾದವರು ಹೊರತು ಬೇರ್ಯಾರೂ ಅದನ್ನು ಸ್ಪರ್ಶಿಸಲಾರರು.(56:80). ಬಾಲ್ಯ ಕಾಲದ ಏಕಾಂತ ಜೀವಿತದಿಂದ ಹೊರಗೆ ಬಂದ ಕೂಡಲೆ ಅವರು ಜನರ ಮುಂದೆ ಪವಿತ್ರ ಖುರ್‌ಆನಿನ ನವೀನ ಮತ್ತು ಸೂಕ್ಷ್ಮ ಜ್ಞಾನವನ್ನು ವಿವರಿಸಿದುದು ಸ್ಪಷ್ಟವಾಗಿ ಹೀಗೆ ಪುರಾವೆ ನೀಡುತ್ತಿದೆ, ಅವರು ತಮ್ಮ ಬಾಲ್ಯಕಾಲವನ್ನು ಅಲ್ಲಾಹನ ವಿಶಿಷ್ಟ ತರಬೇತಿಯನ್ನು

ಪಡೆಯುತ್ತಾ ಕಳೆದರೆಂದು. ಮತ್ತು ಅವರು ಬಾಲ್ಯಕಾಲದಿಂದಲೇ ಮತಹ್ಹಿರೀನ್‌ಗಳ (ಪರಿಶುದ್ಧರ)ಲ್ಲಿ ಸೇರಿದ್ದರೆಂದು.

ಬಾಲ್ಯಕಾಲದಲ್ಲಿ ಅವರ ಇಬಾದತ್‌ಗಳ ಮಟ್ಟ ಹೇಗಿತ್ತು ಎನ್ನುವುದರ ಬಗ್ಗೆ ಶೇಖ್ ಗುಲಾಮ್ ಅಹ್ಮದ್ ಸಾಹಿಬ್ ವಾಯಿಝ್ ರಝಿಯಲ್ಲಾಹು ಅನ್‌ಹು ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಒಮ್ಮೆ ನಾನು ಹೀಗೆ ನಿರ್ಧರಿಸಿದೆ. ಈ ದಿನ ರಾತ್ರಿ ನಾನು ಮಸ್‌ಜಿದ್ ಮುಬಾರಕ್‌ನಲ್ಲಿ ವಾಸಿಸಿ ಏಕಾಂತದಲ್ಲಿ ನನ್ನ ಪ್ರಭುವಿನಿಂದ ನಾನು ಇಚ್ಛಿಸುವುದನ್ನು ಬೇಡಿಕೊಳ್ಳುವೆನೆಂದು. ನಾನು ಮಸ್‌ಜಿದ್‌ಗೆ ತಲಪಿದಾಗ ಕಂಡದ್ದೇನೆಂದರೆ, ಯಾರೋ ಒಬ್ಬರು ಸಾಷ್ಟಾಂಗ ಪ್ರಣಾಮದಲ್ಲಿ ಬಿಕ್ಕಳಿಸುತ್ತಾ ಪ್ರಾರ್ಥಿಸುತ್ತಿದ್ದಾರೆ. ಅವರ ಅಳುವಿನ ಕಾರಣದಿಂದ ನನಗೆ ನಮಾಝ್ ಮಾಡಲಾಗಲಿಲ್ಲ. ಆ ವ್ಯಕ್ತಿಯ ಪ್ರಾಥನೆ ನನ್ನ ಮೇಲೆ ಪ್ರಭಾವ ಉಂಟು ಮಾಡಿತು. ಓ ನನ್ನ ಪ್ರಭೂ, ಈ ವ್ಯಕ್ತಿ ನಿನ್ನಿಂದ ಬೇಡಿಕೊಳ್ಳುವುದನ್ನು ಆ ವ್ಯಕ್ತಿಗೆ ನೀಡು ಎಂದು ನಾನು ಪ್ರಾರ್ಥಿಸಿದೆ. ಆ ವ್ಯಕ್ತಿ ತಲೆ ಎತ್ತಿದರೆ ಯಾರೆಂದು ತಿಳಿಯುವೆನೆಂದು ಕಾಯುತ್ತಾ ನಿಂತುಕೊಂಡು ನಾನು ಬಳಲಿದೆನು. ಆ ವ್ಯಕ್ತಿ ತಲೆ ಎತ್ತಿದಾಗ ಅವರು ಹಝ್‌ರತ್ ಮಿಯಾಂ ಮಹ್‌ಮೂದ್ ಸಾಹಿಬರೆಂದು ತಿಳಿಯಿತು. ನಾನು ಅಸ್ಸಲಾಮು ಅಲೈಕುಮ್ ಹೇಳಿ ಹಸ್ತದಾನ ನೀಡಿದೆ. ನಾನು ಕೇಳಿದೆ: ಮಿಯಾಂ ಈ ದಿನ ಅಲ್ಲಾಹನಿಂದ ಏನೆಲ್ಲಾ ಪಡೆದಿರಿ? ಆಗ ಅವರು ಹೇಳಿದರು: ನಾನು ಹೀಗೆ ಬೇಡಿಕೊಂಡೆನು. ನನ್ನ ಪ್ರಭೂ, ನೀನು ನನಗೆ ನನ್ನ ಕಣ್ಣ ಮುಂದೆಯೇ ಇಸ್ಲಾಮ್ ಜೀವಂತವಾಗುವುದನ್ನು ತೋರಿಸಿಕೊಡು. ಹೀಗೆ ಹೇಳಿ ಅವರು ಮನೆಯೊಳಗೆ ಹೋದರು. ಇಸ್ಲಾಮ್ ಜಯಶಾಲಿಯಾಗುವ ದಿನವನ್ನು ಕಾಣುವ ಕುತೂಹಲ ಭರಿತ ಅಭಿಲಾಷೆ ಆ ಯೌವ್ವನ ಕಾಲದಲ್ಲಿ ಅವರ ಹೃದಯದಲ್ಲಿತ್ತು. ಆದುದರಿಂದ ಅಲ್ಲಾಹನು ಅವರಿಗೆ ಯೌವ್ವನ ಕಾಲದಲ್ಲಿಯೇ ಖಿಲಾಫತ್ತಿನ ಚಾದರವನ್ನು ಹೊದಿಸಿದನು.

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು 1909ರಲ್ಲಿ ತಶಹೀಝುಲ್ ಅಝ್‌ಹಾನ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ದುಆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆ ದುಆ ಹೀಗಿದೆ: ಓ ನನ್ನ ದೇವಾ, ನಾನು ಹೃತ್ಪೂರ್ವಕ ನೋವಿನೊಂದಿಗೆ ಸತ್ಯವಾದ ದುಃಖದೊಂದಿಗೆ ನಿನ್ನ ಸನ್ನಿಧಿಯಲ್ಲಿ ಸಜ್‌ದ ಮಾಡುತ್ತೇನೆ ಮತ್ತು ವಿನಂತಿಸುತ್ತೇನೆ ನನ್ನ ಪ್ರಾರ್ಥನೆ ಆಲಿಸು. ನನ್ನ ಕೂಗಿನ ಕಡೆಗೆ ತಲಪು. ಓ ನನ್ನ ಪರಿಶುದ್ಧ ದೇವಾ, ನನ್ನ ಸಮುದಾಯ ನಾಶವಾಗುತ್ತಿದೆ. ಅವರನ್ನು ನಾಶದಿಂದ ರಕ್ಷಿಸು. ಅವರು ಅಹ್ಮದಿ ಎಂದು ಹೇಳುತ್ತಿರುವರಾದರೂ ಅವರ ಹೃದಯ ಶುದ್ಧವಾಗಿರದಿದ್ದರೆ ಮತ್ತು ನಿನ್ನ ಪ್ರೀತಿಯಿಂದ ಭರಿತವಾಗಿರದಿದ್ದರೆ ಅವರೊಂದಿಗೆ ನನ್ನ ಸಂಬಂಧ ಏನಿದೆ? ಆದುದರಿಂದ ಓ ನನ್ನ ಪ್ರಭೂ, ನೀನು ನಿನ್ನ ರಹ್ಮಾನಿಯತ್ ಮತ್ತು ರಹೀಮಿಯ್ಯತ್ ಗುಣಗಳನ್ನು ಜಾರಿಗೊಳಿಸಿ ಅವರನ್ನು ಪರಿಶುದ್ಧರನ್ನಾಗಿ ಮಾಡು. ಸಹಾಬರ ಹಾಗಿರುವ ಉತ್ಸಾಹ ಅವರಲ್ಲಿ ಸೃಷ್ಟಿಸಲ್ಪಡಲಿ. ಅವರು ನಿನ್ನ ಧರ್ಮದ ಬಗ್ಗೆ ಚಿಂತಿಸುತ್ತಾ ಆತಂಕ ಪಡುವವರಾಗಲಿ. ಅವರ ಮಾತುಗಳಿಗಿಂತ ಅವರ ಕರ್ಮಗಳು ಹೆಚ್ಚು ಉತ್ತಮವೂ ಪರಿಶುದ್ಧವೂ ಆಗಲಿ. ಅವರು ನಿನ್ನ ಪ್ರಿಯ ಚಹರೆಗೋಸ್ಕರ ಬಲಿಯಾಗಲು ಸಿದ್ಧರಾಗಲಿ. ಅವರು ಆದರಣೀಯ ಪೈಗಂಬರರಿಗೋಸ್ಕರ ಆತ್ಮಾರ್ಪಣೆ ಮಾಡುವವರಾಗಲಿ. ಅವರ ಪರವಾಗಿ ನಿನ್ನ ಮಸೀಹ್ ಮಾಡಿದ ಪ್ರಾರ್ಥನೆಗಳು ಅಂಗೀಕರಿಸಲ್ಪಡಲಿ. ಮಸೀಹರ ಪರಿಶುದ್ಧ ಮತ್ತು ಸತ್ಯವಾದ ಉಪದೇಶಗಳು ಅವರ ಹೃದಯಗಳಲ್ಲಿ ನೆಲೆವೂರಲಿ. ಓ ನನ್ನ ದೇವಾ, ನನ್ನ ಸಮುದಾಯವನ್ನು ಎಲ್ಲ ಪರೀಕ್ಷೆಗಳಿಂದಲೂ ದುಃಖಗಳಿಂದಲೂ ರಕ್ಷಿಸು. ಎಲ್ಲ ರೀತಿಯ ವಿಪತ್ತುಗಳಿಂದ ಅವರನ್ನು ಸಂರಕ್ಷಿಸು. ಅವರಲ್ಲಿ ಹಿರಿಯ ಮಹಾನುಭಾವರು ಜನಿಸುವಂತಾಗಲಿ ಮತ್ತು ಈ ಜಮಾಅತ್ ನೀನು ಇಷ್ಟಪಡುವವರ ಜಮಾಅತಾಗಲಿ. ನೀನು ಈ ಗುಂಪಿನ ಜನರನ್ನು ವಿಶಿಷ್ಟವಾಗಿ ಗಮನಿಸುವವನಾಗು. ಅವರು ಶೈತಾನನ ಹಿಡಿತದಿಂದ ಸುರಕ್ಷಿತರಾಗಲಿ. ಅವರ ಮೇಲೆ ಮಲಕ್‌ಗಳು ಇಳಿಯುತ್ತಾ ಇರಲಿ. ನೀನು ಈ ಸಮುದಾಯವನ್ನು ಧಾರ್ಮಿಕವಾಗಿಯೂ ಲೌಕಿಕವಾಗಿಯೂ ಅನುಗ್ರಹಭರಿತವನ್ನಾಗಿ ಮಾಡು – ಆಮೀನ್, ಸುಮ್ಮ ಆಮೀನ್ ಯಾ ರಬ್ಬಲ್ ಆಲಮೀನ್.

(ಕೊನೆಗೆ ಹುಝೂರು ಪ್ರಾರ್ಥಿಸಿದರು:) ಅಲ್ಲಾಹನು ಅವರ ಮೇಲೆ ಸಾವಿರಾರು ಕಾರುಣ್ಯಗಳನ್ನು ಸುರಿಸಲಿ. ನಾವು ಅವರ ನೋವುಭರಿತ ಪ್ರಾರ್ಥನೆ ಅರ್ಥ ಮಾಡಲು, ಕರ್ಮ ನಿರತರಾಗಲು, ಅಹ್ಮದಿಯಾಗುವ ಉದ್ದೇಶ ಈಡೇರಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ – ಆಮಿನ್.

*****

***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 22-02-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon